ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ 1ನೇ ಮಾರ್ಚ್ 1996 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಬಸ್ಸುಗಳ ಪರವಾನಿಗೆ

106 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರವಾನಿಗೆ ಪಡೆದ ಖಾಸಗಿ ಬಸ್ಸುಗಳೆಷ್ಟು?

ಆ) ಕೆಲವು ಪರವಾನಿಗೆ ಪಡೆದ ಬಸ್ಸುಗಳು ಪರವಾನಿಗೆ ಪಡೆದ ಸ್ಥಳಕ್ಕೆ ಹೋಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸಾರ್ವಜನಿಕರ ದೂರು ಬಂದಲ್ಲಿ ಅಂತಹ ಬಸ್ಸುಗಳ ಪರವಾನಿಗೆಯನ್ನು ರದ್ದು ಮಾಡಲಾಗುವುದೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) 1200.

ಆ) ಹೌದು.

ಇ) ವಾಹನವನ್ನು ಓಡಿಸದೇ ಇರುವುದು ಪರವಾನಿಗೆಯಲ್ಲಿನ ನಿಬಂಧನೆಯನ್ನು ಉಲ್ಲಂಘಿಸಿದಂತಾಗುತ್ತದೆ. ಅಂತಹ ಪ್ರಕರಣಗಳು ಮೋಟಾರು ವಾಹನ ಕಾಯ್ದೆ 1988 ಪ್ರಕರಣ 86ನ್ನು ಆಕರ್ಷಿಸುತ್ತದೆ. ಮೋಟಾರು ವಾಹನ ಕಾಯ್ದೆ ಪ್ರಕರಣ 86ರಲ್ಲಿ ಅಂತಹ ಅಪರಾಧಗಳಿಗೆ ನಿಗದಿತ ರಾಜ ದಂಡವನ್ನು ಪರವಾನಿಗೆದಾರನು. ಒಪ್ಪಿದ್ದಲ್ಲಿ ವಿಧಿಸಬಹುದಾಗಿದೆ. ಇಲ್ಲವಾದಲ್ಲಿ ಪರವಾನಿಗೆಯನ್ನು ಅಮಾನತ್ತು ಆಥವಾ ರದ್ದು ಪಡಿಸುದಾಗಲೀ ಮಾಡಬಹುದಾಗಿದೆ.

ಶ್ರೀ ಯು.ಆರ್. ಸಭಾಪತಿ (ಕೆ. ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಜಿಲ್ಲೆಯಲ್ಲಿ ಪರವಾನಿಗೆ ಪಡೆದ ಖಾಸಗಿ ಬಸ್ಸುಗಳ ಸಂಖ್ಯೆ ಮತ್ತು ಪರವಾನಿಗೆ ಪಡೆದ ಬಸ್ಸುಗಳು ಪರವಾನಿಗೆ ಪಡೆದ ಸ್ಥಳಕ್ಕೆ ಹೋಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಇಂಥ ಪ್ರಕರಣಗಳಲ್ಲಿ ಸಾರ್ವಜನಿಕರಿಂದ ದೂರು ಬಂದಿದೆಯೇ? ಮತ್ತು ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಕೆ.ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೆ, ಪರವಾನಿಗೆ ಪಡೆದುಕೊಂಡಿರುವ ಬಸ್ಸುಗಳು ಅವುಗಳು ಪರವಾನಿಗೆ ಪಡೆದ ಸ್ಥಳಕ್ಕೆ ಹೋಗದಿದ್ದರೆ ನಿಯಮ 86ರ ಕೆಳಗೆ ಕ್ರಮ ತೆಗೆದುಕೊಳ್ಳಲು ಅಧಿಕಾರವಿದೆ. ಆ ಪ್ರಕಾರವಾಗಿ ನಾವು ಕ್ರಮ ಜರುಗಿಸುತ್ತಿದ್ದೇವೆ. ಇಂಥ ಪ್ರಕರಣಗಳಲ್ಲಿ 23 ಪರವಾನಿಗೆಗಳನ್ನು ಅಮಾನತ್ತಿನಲ್ಲಿ ಇಟ್ಟಿದ್ದೇವೆ. ಇನ್ನು ಕೆಲವಕ್ಕೆ ಕಾಂಪೌಂಡಿಂಗ್ ಪ್ರಾವಿಜನ್ ಇರುವುದರಿಂದ ದಂಡವನ್ನು ಕೊಟ್ಟು ಮುಂದೆ ಈ ರೀತಿ ಮಾಡುವುದಿಲ್ಲವೆಂದು ಹೇಳಿ ಹೋಗುತ್ತಾರೆ. ಅಂಥ ಪ್ರಕರಣಗಳು ಕಂಡು ಬಂದಲ್ಲಿ ಸೂಕ್ತ ಕ್ರಮ ತೆಗದುಕೊಳ್ಳುತ್ತೇವೆ.

ಶ್ರೀ ಎನ್. ಯೋಗೇಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ ರಾಷ್ಟ್ರೀಯ ಹೆದ್ದಾರಿಗಳಲ್ಲೇನು ಸರ್ಕಾರಿ ಬಸ್ಸುಗಳು ಓಡಾಡುತ್ತಿವೆ ಅವು ಸಾಕಾಗದೆ ತೊಂದರೆಯುಂಟಾಗಿರುವುದರಿಂದ ಅಂಥ ಕಡೆಗಳಲ್ಲಿ ಖಾಸಗಿ ಬಸ್ಸುಗಳನ್ನು ಓಡಿಸಲು ತಾವು ಅವಕಾಶ ಮಾಡಿಕೊಡುತ್ತೀರೋ?

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ನಾನ್-ಮೆನಾಪಲಿಯಿದ್ದರೆ ಅಲ್ಲಿ ಖಾಸಗಿ ಬಸ್ಸುಗಳನ್ನು ಓಡಿಸಲು ಪರವಾನಿಗೆ ಕೊಡಲು ತೊಂದರೆ ಇಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಅಧ್ಯಕ್ಷರೆ ಮಂಡ್ಯ, ಮದ್ದೂರುಗಳಲ್ಲಿ ಖಾಸಗಿ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಮೇಲೆ ಪ್ರಯಾಣಿಕರು ನೂರಾರು ಸಂಖ್ಯೆಯಲ್ಲಿ ಕುಳಿತು ಬರುತ್ತಾರೆ, ಇದರಿಂದ ರಸ್ತೆಯ ಬದಿಯಲ್ಲಿರತಕ್ಕ ಮರದ ಕೊಂಬೆಗಳು ಅವರುಗಳಿಗೆ ಹೊಡೆದು ಅವರ ತಲೆಗೆ ಏಟು ಬಿದ್ದಿರುತ್ತದೆ. ಅಂಥ ಪ್ರಯಾಣಿಕರು ಬಸ್ಸುಗಳ ಮೇಲೆ ಪ್ರಯಾಣ ಮಾಡುವುದನ್ನು ತಪ್ಪಿಸಲು ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೆ, ಬಸ್ಸಿನ ಸಮಸ್ಯೆಯಿಂದ ಶಾಸಕರಾದ ನಾವುಗಳು ಎಲ್ಲೂ ಓಡಾಡದಿರತಕ್ಕ ಪರಿಸ್ಥಿತಿಯಾಗಿದೆ. ಇದರ ಬಗ್ಗೆ ಜಿಲ್ಲಾವಾರು ಡಿ.ಸಿ., ಆರ್.ಟಿ.ಓ, ಶಾಸಕರು ಎಲ್ಲರೂ ಸಭೆ ಸೇರಿ ಖಾಸಗಿ ಬಸ್ಸುಗಳನ್ನು ಆಯಾಯ ಜಿಲ್ಲೆಗಳಲ್ಲಿ ಎಷ್ಟು ಓಡಾಡುತ್ತಿದೆ, ಸರ್ಕಾರಿ ಬಸ್ಸುಗಳೆಷ್ಟು ಓಡಾಡುತ್ತಿದೆ, ಯಾವ್ಯಾವ ಕಡೆಗಳಲ್ಲಿ ಬಸ್ಸುಗಳ ಅನಾನುಕೂಲವಿದೆ ಎಂಬ ಬಗ್ಗೆ ವರದಿಯನ್ನು ತರಿಸಿಕೊಂಡು ಅದರ ಮೇಲೆ ಬಸ್ಸುಗಳ ಸೌಕರ್ಯವನ್ನು ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಇಲ್ಲದಿದ್ದರೆ ನಾವಿಲ್ಲಿ ಸುಮ್ಮನೆ ಏನೋ ಪ್ರಶ್ನೆಗಳನ್ನು ಕೇಳುತ್ತಿರುತ್ತೇವೆ, ಮಂತ್ರಿಗಳು ಏನೋ ಬಸ್ಸುಗಳನ್ನು ಹಾಕುತ್ತೇವೆಂದು ಹೇಳುತ್ತಾರೆ. ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ಕ್ರಮತೆಗೆದುಕೊಂಡು 13 ಜಿಲ್ಲೆಗಳಲ್ಲಿ ಅಂಥ ಸಭೆಗಳನ್ನು ಮಾಡಿಯಾಗಿದೆ. ತಮ್ಮಜಿಲ್ಲೆಯಲ್ಲೂ ಕಾರ್ಯಕ್ರಮವನ್ನಿಟ್ಟು ಕೊಂಡು ಮಾಡುತ್ತಿದ್ದೇವೆ. ಬಸ್ಸಿನ ಟಾಪ್ ಮೇಲೆ ಪ್ರಯಾಣ ಮಾಡುತ್ತಿರುವ ಬಗ್ಗೆ ಹೇಳುವುದಾದರೆ ಈ ಸಮಸ್ಯೆ ಕೇವಲ ಮಂಡ್ಯ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ, ಇಡೀ ರಾಜ್ಯದಲ್ಲಿದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಹೆಚ್ಚು ಹೆಚ್ಚು ಬಸ್ಸುಗಳನ್ನು ಹಾಕಲು ಯತ್ನಿಸುತ್ತಿದ್ದೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಆ ಬಸ್ಸುಗಳನ್ನು ನೋಡಲು ಆಗುವುದಿಲ್ಲ. ಬಸನ ಟಾಮ್ ಮೇಲೆ ಪ್ರಯಾಣ ಮಾಡುವುದನ್ನು ತಪ್ಪಿಸುವುದಕೋಸ್ಕರ ಸರ್ಕಾರ ಹೆಚ್ಚು ಬಸ್ಸುಗಳನ್ನು ಹಾಕಬೇಕು, ಇಲ್ಲದಿದ್ದರೆ ಜನರು ರೊಚ್ಚಿಗೇಳುತ್ತಾರೆ, ಅವರ ಪ್ರಾಣಹಾನಿಯನ್ನು ಸರ್ಕಾರವೇ ಮಾಡಿದಂತಾಗುತ್ತದೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿ

108 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯ ವ್ಯಾಪ್ತಿಯಲ್ಲಿ ಯಾವ ಯಾವ ಜಿಲ್ಲೆಗಳು ಒಳಗೊಂಡಿರುತ್ತದೆ ಮತ್ತು ಮಂಡಳಿಯ ಕೆಲಸ ಕಾರ್ಯಗಳ ವ್ಯಾಪ್ತಿ ಏನು?

ಆ) 1995-96ನೇ ಸಾಲಿಗಾಗಿ ಸದರಿ ಮಂಡಳಿಗೆ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ ಮತ್ತು ಈ ಹಣವನ್ನು ಯಾವ ಯಾವ ಕೆಲಸಗಳಿಗಾಗಿ ವಿನಿಯೋಗಿಸಲಾಗುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದ ಎಂಟು ಜಿಲ್ಲೆಗಳು ಪೂರ್ಣವಾಗಿ ಅಥವಾ ಭಾಗಶಃ ಈ ಮಂಡಳಿಯ ವ್ಯಾಪ್ತಿಗೆ ಒಳಪಡುತ್ತದೆ. ಇವುಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಗಳು
1.	ಬೆಂಗಳೂರು (ಗ್ರಾಮಾಂತರ)
2.	ತುಮಕೂರು.
3.	ಹಾಸನ.
4.	ಹಾಸನ.
5.	ಚಿತ್ರದುರ್ಗ.
6.	ಧಾರವಾಡ.